ಅಧ್ಯಕ್ಷರು :– ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳುತ್ತೇನೆ. ಮಾನ್ಯ ಯಡಿಯೂರಪ್ಪನವರೆ, ನಿಮ್ಮ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬಹುದು.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ನ್ಯಾಯಾಂಗ ಇಲಾಖೆಗೆ ಹಣಕಾಸಿನ ಸ್ವಾಯುತ್ತತೆ ಕೇಳಿರುವ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೀರೆಂದು ತಾವು ಹೇಳಿದ್ದೀರಿ. ಆದ್ದರಿಂದ, ಮೊದಲು ಇದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ರಾಮಸ್ವಾಮಿಯವರೆ, ಮಾನ್ಯ ಕಾನೂನು ಸಚಿವರು ಇಲ್ಲ. ಆದ್ದರಿಂದ, ಮಾನ್ಯ ಸಚಿವರನ್ನು ಕರೆಸುತ್ತೇನೆ. ಅನಂತರ ಈ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯವರು ಕುಡಿಯುವ ನೀರಿಗೋಸ್ಕರ ಹೊಸ ವೆಂಟೆಡ್ ಡ್ಯಾಮ್ ಮಾಡಬೇಕೆಂಬುದರ ಬಗ್ಗೆ ಮೊನ್ನೆದಿವಸ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಇದಕ್ಕೆ ಉತ್ತರ ಕೊಡುತ್ತೇನೆಂದು ಹೇಳಿದರು. ಆದರೆ, ಇವತ್ತಿನವರೆಗೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿಲ್ಲ. ಇದರ ಬಗ್ಗೆ ಅಲ್ಲಿ ಈಗಾಗಲೇ ಗಲಾಟೆ ಪ್ರಾರಂಭವಾಗಿದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಉತ್ತರ ಕೊಡಬೇಕು.

ಅಧ್ಯಕ್ಷರು: ಇದಕ್ಕೆ ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರನ್ನು ಕರೆಸಿ.

ಅಧ್ಯಕ್ಷರು: ಮಾನ್ಯ ಸಚಿವರು ಬಂದನಂತರ ತೆಗೆದುಕೊಳ್ಳುತ್ತೇನೆ. ಏಕೆಂದರೆ, ಇದು ಬಹಳ ಮುಖ್ಯವಾದ ವಿಷಯವಾಗಿದೆ. ಮಾನ್ಯ ಸಚಿವರು ಕರೆಸುವುದಕ್ಕೆ ಹೇಳುತ್ತೇನೆ. ಈಗ ಮಾನ್ಯ ಯಡಿಯೂರಪ್ಪನವರೆ, ತಾವು ಸರ್ಕಾರದ ಗಮನ ಸೆಳೆಯಿರಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ತಾಲ್ಲೂಕಿನ ಮಳವಳ್ಳಿ ಎಂಬ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಗೆ ಕಟ್ಟಡವಿಲ್ಲದೆ, ಇದಕ್ಕಾಗಿ ಜಾಗವನ್ನು ಕೂಡ ನಾವು ಒದಗಿಸಿದ್ದೆವು. ಸದರಿ ಕಟ್ಟಡದ ಕೆಲಸ ನಬಾರ್ಡ್ ಯೋಜನೆಯಡಿಯಲ್ಲಿ ಪ್ರಾರಂಭವಾಗುತ್ತದೆಂದು ಸಂಬಂಧಪಟ್ಟಂಥ ಗುತ್ತಿಗೆದಾರ ಸಂಸ್ಥೆಯಾದ ಮೆ.

ನಾಗಾರ್ಜುನ ಕನ್ಸ್‌ಟ್ರಕ್ಷನ್ ಕಂಪನಿಯವರು ಅಲ್ಲಿ ಸ್ಥಳ ಪರಿಶೀಲನೆ ಮಾಡಿ ಮತ್ತು ಇದಕ್ಕೆ ಮಾರ್ಕಿಂಗ್ ಮಾಡಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿ ಹೋದರು. ಆದರೆ, ಈಗ ದಿಢೀರೆಂದು ಸದರಿ ಕೆಲಸ ಪ್ರಾರಂಭವಾಗದೆ ಹಾಗೆಯೇ ನಿಂತಿದೆ. ಇದು ಕೇವಲ ಶಿಕಾರಿಪುರ ತಾಲ್ಲೂಕಿನಲ್ಲೊಂದೆ ಅಲ್ಲ. ಇವತ್ತಿನದಿವಸ ನಬಾರ್ಡ್‌ನಿಂದ ತೆಗೆದುಕೊಂಡಿರತಕ್ಕಂಥ ಕಾಮಗಾರಿಗಳು ನಿಲ್ಲುವುದಕ್ಕೆ ಏನು ಕಾರಣ? ಈ ರೀತಿಯಾದಾಗ ಅಲ್ಲಿರತಕ್ಕಂಥ ಜನರಿಗೆ ನಾವ್ಹೇಗೆ ಮುಖ ತೋರಿಸುವುದು? ಶಿಕಾರಿಪುರ ತಾಲ್ಲೂಕಿನ ಮಳವಳ್ಳಿ ಗ್ರಾಮ ಹಾಗೂ ಇತರೆ ಕಡೆ ಮಂಜೂರಾಗಿರತಕ್ಕಂಥ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಏನಾದರು ತೊಂದರೆ ಇದೆಯೆ?

ಶ್ರೀ ಎನ್. ಚೆಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 17–11–2003ರಂದು ನಬಾರ್ಡ್ ಯೋಜನೆಯಡಿಯಲ್ಲಿ 94 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡವನ್ನು ಹೊಸದಾಗಿ ಕಟ್ಟುವುದಕ್ಕೆ ರಾಜ್ಯ ಸರ್ಕಾರ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಮತ್ತೆ ಎಲ್ಲರ ಕೋರಿಕೆಯಂತೆ ಮಳವಳ್ಳಿ ಗ್ರಾಮದಲ್ಲಿ ಸೇರಿದಂತೆ ಒಟ್ಟು 9 ಕಟ್ಟಡಗಳನ್ನು ಕಟ್ಟುವುದರ ಬಗ್ಗೆ ನಬಾರ್ಡ್ ಕಳುಹಿಸಿಕೊಡಲಾಗಿತ್ತು. ಆದರೆ ನಬಾರ್ಡ್‌ನವರು ಇದನ್ನು ಒಪ್ಪದೆ ವಾಪಸ್ಸು ಕಳುಹಿಸಿಕೊಟ್ಟ ನಂತರ, ಮತ್ತೆ ಇವುಗಳು ಅತೀ ಅವಶ್ಯಕತೆ ಇರುವುದರಿಂದ ಇವುಗಳನ್ನು ಮಾಡಲೇಬೇಕೆಂದು ಕ್ಯಾಬಿನೆಟ್ ಉಪ ಸಮಿತಿ ತೀರ್ಮಾನ ತೆಗೆದುಕೊಂಡ ನಂತರ ಇದಕ್ಕೆ ನಬಾರ್ಡ್‌ನವರು ಒಪ್ಪಿದ್ದಾರೆ. ಈ ಎಲ್ಲಾ ಪ್ರೋಸೆಸ್ ಆಗುವಂಥ ಸಮಯದಲ್ಲಿ ಮೊದಲು ಮಂಜೂರಾಗಿದ್ದಂಥ 94 ಕಟ್ಟಡಗಳನ್ನು ಕಟ್ಟಲು ಪ್ರಾರಂಭವಾಗಿ ಅನಂತರ ಇವುಗಳು ಮುಗಿಯುವ ಹಂತದವರೆಗೆ ಬಂದಿದ್ದರಿಂದ ಈ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಕೆಲಸ ಮಾಡುವುದಕ್ಕೆ ಆಗಲಿಲ್ಲ. ಕಾರಣ ಏನೆಂದರೆ ಅವರಿಗೆ ನಿಗದಿ ಮಾಡಿರತಕ್ಕಂಥ ಸಮಯ ಮುಗಿದು ಹೋಗಿತ್ತು. ಮತ್ತೆ ಈಗ 10ನೇ ನಬಾರ್ಡ್ ೯ ಯೋಜನೆಯಡಿಯಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂಥ ಪಟ್ಟಿಯನ್ನು ನಾವು ಮಂಜೂರು ಮಾಡಿ ಇದನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಿಕೊಟ್ಟಿದ್ದೇವೆ. ಒಂದು ವಾರ ಅಥವಾ 10 ದಿವಸಗಳಲ್ಲಿ ಕೇಂದ್ರದಿಂದ ಇದು ಬರಬಹುದೆಂದು ನಾವು ನಿರೀಕ್ಷೆ ಮಾಡಿದ್ದೇವೆ. ಏಪ್ರಿಲ್ ಮೊದಲ ಅಥವಾ ಎರಡನೇ ವಾರದಲ್ಲಿ ಬಂದ ತಕ್ಷಣ ಪ್ರಾರಂಭ ಮಾಡುತ್ತೇವೆ. ನಾವು ಈಗಾಗಲೇ ಇದಕ್ಕೆ ಟೆಂಡರ್ ಪ್ರೊಸಸ್

ಮಾಡುವುದಕ್ಕೆ ಇಲಾಖೆ ವತಿಯಿಂದ ತೀರ್ಮಾನ ತೆಗೆದುಕೊಂಡಿದ್ದೇವೆ. ಆದಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಈ 9 ಕಾಮಗಾರಿಗಳನ್ನು ಹಿಂದೆ ತೆಗೆದುಕೊಂಡು ನಿಂತಿದೆವೆಯೋ ಅದರ ಜೊತೆಗೆ ಮತ್ತೆ 31 ಸೇರಿಸಿ ಒಟ್ಟು 40 ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಅನುಮತಿ ನೀಡಲು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಇದಕ್ಕೇನು ನನ್ನ ಅಭ್ಯಂತರವಿಲ್ಲ. ಮತ್ತೆ ಇದರ ಬಗ್ಗೆ ಬಹಳ ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ನಾಗಾರ್ಜುನ ಕನ್ಸ್‌ಟ್ರಕ್ಷನ್ ರವರಿಗೆ ಈ ಕೆಲಸವನ್ನು ಎಂಟ್ರಸ್ಟ್ ಮಾಡಿದ ನಂತರ ಸಂಬಂಧಪಟ್ಟಂಥ ಗುತ್ತಿಗೆದಾರ ಅಲ್ಲಿಗೆ ಬಂದು ಮಾರ್ಕಿಂಗ್ ಮಾಡಿ ನಬಾರ್ಡ್‌ನಿಂದ ಇದಕ್ಕೆ ಹಣ ಬರಲಿಲ್ಲವೆಂಬ ಕಾರಣಕ್ಕಾಗಿ ಅಲ್ಲಿ ಕೆಲಸ ಪ್ರಾರಂಭ ಮಾಡಿಲ್ಲ. ದಿನಾಂಕ 17–11–2003ರ ಪಟ್ಟಿಯಲ್ಲಿ ಮಳವಳ್ಳಿ ಸೇರಿರಲಿಲ್ಲವೆಂದು ಹೇಳಿದ್ದೀರಿ. ಆದರೆ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಇದು ಪಟ್ಟಿಯಲ್ಲಿ ಸೇರಿದ್ದರಿಂದಲೇ ಅನುಮತಿ ಸಿಕ್ಕಿತು. ಅನುಮತಿ ಸಿಕ್ಕಿದ ನಂತರವೆ ಟೆಂಡರ್ ಕರೆಯಲಾಗಿದೆ. ಕೆಲಸ ಪ್ರಾರಂಭವಾದ ಮೇಲೆ ಕೈ ಬಿಟ್ಟು ಹೋಯಿತೆಂದರೆ ಹೇಗೆ? ಈ ರೀತಿಯಾಗಬಾರದಲ್ಲವೆ? ಈಗ 9ರ ಜೊತೆಯಲ್ಲಿ ಇದನ್ನು ತೆಗೆದುಕೊಂಡು ಮಾಡಿ ಮುಗಿಸುತ್ತೇವೆಂದು ತಾವು ಹೇಳಿದ್ದೀರಿ. ಆದ್ದರಿಂದ ಕೊನೇಪಕ್ಷ ಮುಂದಿನ ತಿಂಗಳಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಿ ನಾನು ಗೌರವದಿಂದ ಅಲ್ಲಿ ಓಡಾಡುವಂತೆಯಾದರು ಮಾಡಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಸಾರಿ ಯಾವುದೇ ರೀತಿಯ ವ್ಯತ್ಯಾಸವಾಗುವುದಿಲ್ಲ. ಈಗಾಗಲೇ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಅನುಮತಿ ಬಂದ ತಕ್ಷಣವೇ ಕೆಲಸ ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್ ರವರೆ, ತಮ್ಮ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅಧ್ಯಕ್ಷರೆ, ಈ ಒಂದು ಕಳಸಾ ಬಂಡೂರಿ ನಾಲಾ ಯೋಜನೆಯನ್ನು ಮಲಪ್ರಭಾ ನದಿಗೆ ಜೋಡಣೆ ಮಾಡತಕ್ಕಂಥದ್ದು ಮತ್ತು ಇದರಿಂದ ಹುಬ್ಬಳ್ಳಿ–ಧಾರವಾಡ